# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 738 |
| ಸದಸ್ಯರ ಹೆಸರು | : | ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19.12.2018 |
| ಉತ್ತರಿಸುವವರು | : | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೆನರಾ ವೃತ್ತದ ಹಳಿಯಾಳ ವಿಭಾಗದ ಸಾಂಬ್ರಾಣಿ ವಲಯದಲ್ಲಿ ಬೆಲೆ ಬಾಳುವ ಮರಗಳ ಅಕ್ರಮ ಸಾಗಾಣಿಕೆ ಪೊಲೀಸ್ ವಾಹನದಲ್ಲಿ ಆಗಿದ್ದು, ಪೊಲೀಸ್ ಇಲಾಖೆಯ ವಾಹನ ಚಾಲಕರ ಮೇಲೆ ಕ್ರಮ ಕೈಗೊಂಡು ಸಂಬಂಧಿಸಿದ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳದಿರಲು ಕಾರಣವೇನು; ಇದಕ್ಕೆ ನಿಯಮಾವಳಿಯಲ್ಲಿ ಅವಕಾಶವಿದೆಯೇ; (ವಿವರ ನೀಡುವುದು) | ಕೆನರಾ ವೃತ್ತದ ಹಳಿಯಾಳ ವಿಭಾಗದ ಸಾಂಬ್ರಾಣಿ ವಲಯದಲ್ಲಿ ಬೆಲೆಬಾಳುವ ಸಾಗವಾನಿ ಮರದ ತುಂಡುಗಳು ಪೋಲೀಸ್ ವಾಹನದಲ್ಲಿ ಸಾಗಾಣಿಕೆ ಮಾಡುತ್ತಿರುವಾಗ ಅರಣ್ಯ ಇಲಾಖೆಗೆ ಸಿಕ್ಕಿರುವುದಿಲ್ಲ. ಕರ್ನಾಟಕ ಅರಣ್ಯ ಕಾಯಿದೆ, 1963ರ ಕಲಂ 62(1), 62(3) ರೀತ್ಯ ಪೋಲಿಸ್ ಇಲಾಖಾ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದಂತೆ ದಿನಾಂಕ: 05.01.2018ರಂದು ಸಾಯಂಕಾಲ 19-15 ಘಂಟೆಗೆ ಬಾತ್ಮಿ ಬಂದ ಪ್ರಕಾರ ಶ್ರೀ ಸುಂದರೇಶ.ಕೆ. ಹೊಳೆಣ್ಣನವರ, ಸಿ.ಪಿ.ಐ, ಹಳಿಯಾಳ ವೃತ್ತ ಮತ್ತು ಪೋಲೀಸ್ ಇಲಾಖೆಯ ಸಿಬ್ಬಂದಿಯವರು ಸಾಂಬ್ರಾಣಿ ವಲಯ ವ್ಯಾಪ್ತಿಯಲ್ಲಿ ಕಳ್ಳಭಟ್ಟಿ ಸಾರಾಯಿಯ ಬೆನ್ನತ್ತಿ ಗಸ್ತು ಕರ್ತವ್ಯದಲ್ಲಿದ್ದಾಗ ಗರಡೊಳ್ಳಿ ಗ್ರಾಮದ ಗರಡೊಳಿವಾಡಾ ರಸ್ತೆ ಪಕ್ಕದ ತಗ್ಗುಗಳಲ್ಲಿ, ಗಿಡಗಂಟಿಗಳಲ್ಲಿ ಅಕ್ರಮವಾಗಿ ದಾಸ್ತಾನು ಇಟ್ಟ ಸಾಗುವಾನಿ ಮರದ 5 ತುಂಡುಗಳು ಮತ್ತು 7 ಸಾಗುವಾನಿ ಹಲಗೆಗಳನ್ನು ಜಪ್ತು ಪಡಿಸಿ ನಂತರ ಪ್ರಥಮ ವರ್ತಮಾನ ವರದಿಯ ಅಪರಾಧ ಸಂಖ್ಯೆ: 4/2018 ದಿನಾಂಕ: 05.01.2018 ರಂತೆ ಕರ್ನಾಟಕ ಅರಣ್ಯ ಕಾಯ್ದೆ, 1963 ರ ಕಲಂ 24(ಇ) ಮತ್ತು ಐ.ಪಿ.ಸಿ. 379 ಪ್ರಕಾರ ಜಪ್ತು ಪಡಿಸಿ ಪೋಲೀಸ್ ಡಿ.ಎ.ಆರ್ ವಾಹನದಲ್ಲಿ ಸದರಿ ಮರಮುಟ್ಟುಗಳನ್ನು ಪೋಲೀಸ್ ಠಾಣೆಗೆ ಸಾಗಿಸಿದ್ದುದರ ಬಗ್ಗೆ ಪೋಲೀಸ್ ಇಲಾಖೆಯವರು ನೀಡಿದ ವರದಿಯಿಂದ ತಿಳಿದುಬಂದಿರುತ್ತದೆ.<br><br>ಸದರಿ ಅರಣ್ಯ ಅಪರಾಧ ಪ್ರಕರಣದಲ್ಲಿ ಆರೋಪಿಗಳು ಪತ್ತೆಯಾಗಿರುವುದಿಲ್ಲ. ಕಾನೂನು ರೀತ್ಯ ಪೋಲೀಸ್ ಅಧಿಕಾರಿಗಳು ಎಫ್.ಐ.ಆರ್ ಸಂಖ್ಯೆ: 4/2018 ದಿನಾಂಕ: 05.01.2018 ರಂತೆ ತಾವೇ ಅರಣ್ಯ ಅಪರಾಧ ಪ್ರಕರಣ ದಾಖಲಿಸಿ ಮರಮುಟ್ಟು ಜಪ್ತಿಮಾಡಿ ಪೋಲೀಸ್ ಇಲಾಖೆಯ ವೃತ್ತ ಕಛೇರಿ ಆವರಣ, ಹಳಿಯಾಳಕ್ಕೆ ಸಾಗಿಸಿರುವುದರಿಂದ ಸದರಿ ಡಿ.ಎ.ಆರ್ ಪೋಲೀಸ್ ವಾಹನವನ್ನ ಅರಣ್ಯ ಇಲಾಖೆಯಿಂದ ಮುಟ್ಟುಗೋಲು ಹಾಕಿಕೊಳ್ಳು ಅವಕಾಶವಿರುವುದಿಲ್ಲ. |

| ಕ್ರ ಸಂ. | ಪ್ರಶ್ನೆ | ಉತ್ತರ |
| --- | --- | --- |
| ಆ) | ಸದರಿ ವಾಹನದಲ್ಲಿ ಅಕ್ರಮ ಬೆಲೆ ಬಾಳುವ ಸಾಗವಾನಿ ಮರದ ಸಾಗಾಣಿಕೆಯಲ್ಲಿ ಅಧಿಕಾರಿಯೊಬ್ಬರು ನೇರ ಶಾಮೀಲಾಗಿರುವುದಕ್ಕೆ ಮಹತ್ವದ ದಾಖಲೆ ಸಂಬಂಧಿಸಿದ ಅರಣ್ಯ ಇಲಾಖೆಯ ಅಧಿಕಾರಿಯ ಹತ್ತಿರ ಇದ್ದರೂ ಸದರಿ ವಿಷಯದಲ್ಲಿ ಸರ್ಕಾರ ಕೂಲಂಕಷ ತನಿಖೆ ಮಾಡಿ ಅದರಲ್ಲಿ ಭಾಗಿಯಾಗಿರುವವರ ಮೇಲೆ ಕ್ರಮ ಗೊಳ್ಳಬೇಕಾಗಿದ್ದು ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರಿಗೆ ಸಂಶಯಕ್ಕೆ ಆಸ್ಪದವಾಗಿದ್ದು ಈ ಬಗ್ಗೆ ಸ್ಪಷ್ಟ ವರದಿ ನೀಡುವುದು; | ಸದರಿ ಅರಣ್ಯ ಅಪರಾಧ ಪ್ರಕರಣಗಳಲ್ಲಿ ಯಾವುದೇ ಅಧಿಕಾರಿಯ ನೇರ ಶಾಮೀಲಾತಿ ಬಗ್ಗೆ ಮಾಹಿತಿ ಅರಣ್ಯ ಇಲಾಖೆಗೆ ಇರುವುದಿಲ್ಲ. ಆದರೂ, ಸದರಿ ಅರಣ್ಯ ಅಪರಾಧ ಪ್ರಕರಣದ ಬಗ್ಗೆ ವಲಯ ಅರಣ್ಯಾಧಿಕಾರಿಗಳು, ಸಾಂಬ್ರಾಣಿ ವಲಯರವರು ಪ್ರತ್ಯೇಕವಾಗಿ ಈ ಬಗ್ಗೆ ತನಿಖೆ ಕೈಗೆತ್ತಿಕೊಂಡಿದ್ದು, ತನಿಖೆ ಪ್ರಗತಿಯಲ್ಲಿದೆ. |
| ಇ) | ಸದರಿ ಬೆಲೆ ಬಾಳುವ ಮರ ಅಕ್ರಮವಾಗಿ ಸಂಗ್ರಹಿಸಿದ ಬಗ್ಗೆ ಅಲ್ಲಿಗೆ ಹೋದ ಪೊಲೀಸ್ ಅಧಿಕಾರಿ ಸಂಬಂಧಿಸಿದ ಅರಣ್ಯ ಇಲಾಖೆ ಅಧಿಕಾರಿಗೆ ನಿರ್ದೇಶನ ನೀಡುವುದರ ಬದಲು ಪೊಲೀಸ್ ವಾಹನದಲ್ಲಿ ಅಷ್ಟೊಂದು ಅಕ್ರಮ ಕಟ್ಟಿಗೆ ತಂದು ಸಂಶಯಕ್ಕೆ ಆಸ್ಪದವಾಗಿರುವ ವಿಷಯ ಸಾರ್ವಜನಿಕ ವಲಯದಲ್ಲಿ ತಿಳಿದು ಬಂದರೂ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ? (ವಿವರ ನೀಡುವುದು) | ಕರ್ನಾಟಕ ಅರಣ್ಯ ಕಾಯಿದೆ, 1963ರ ಕಲಂ 62(1), 62(3) ರೀತ್ಯ ಪೋಲಿಸ್ ಅಧಿಕಾರಿಗಳಿಗೆ ಕೂಡ ಅರಣ್ಯ ಅಪರಾಧ ಪ್ರಕರಣ ದಾಖಲಿಸಿ ಅನಧಿಕೃತ ಮರಮುಟ್ಟು ಜಪ್ತಿ ಮಾಡಿ ಕಾನೂನು ರೀತ್ಯ ಕ್ರಮಕೈಗೊಳ್ಳಲು ಅಧಿಕಾರ ನೀಡಿರುವುದರಿಂದ ಸದರಿ ಅನಧಿಕೃತ ಮರಮುಟ್ಟು ಸಂಗ್ರಹಿಸಿದ ಬಗ್ಗೆ ಅರಣ್ಯ ಇಲಾಖೆಗೆ ನಿರ್ದೇಶನ ನೀಡಲೇಬೇಕು ಎಂದು ಕಟ್ಟುಪಾಡು ಇರುವುದಿಲ್ಲ. ಆದರೂ, ಸದರಿ ಅರಣ್ಯ ಅಪರಾಧ ಪ್ರಕರಣದ ಬಗ್ಗೆ ಕೂಲಂಕುಷವಾಗಿ ತನಿಖೆಯನ್ನು ವಲಯ ಅರಣ್ಯಾಧಿಕಾರಿ, ಸಾಂಬ್ರಾಣಿ ವಲಯರವರು ಕೈಗೆತ್ತಿಕೊಂಡಿರುತ್ತಾರೆ. ಅದಲ್ಲದೆ ಪ್ರಸ್ತುತ ಡಿಸಿಪಿ / ಪೊಲೀಸ್ ಇನ್ಸ್‌ಪೆಕ್ಟರ್ / ಸಿಇಎನ್, ಪೊಲೀಸ್ ಠಾಣೆ, ಕಾರವಾರ ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಕೈಗೊಂಡಿರುತ್ತಾರೆ. |

ಸಂಖ್ಯೆ: ಅಪಜೀ 95 ಎಫ್‌ಡಿಪಿ 2018

(ಆರ್.ಶಂಕರ್)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು